ದಡಾರ

ಮತ್ತು ರುಬೆಲ್ಲಾ

ಲಸಿಕಾ ಅಭಿಯಾನ

Ministry of Health and Family Welfare
Government of India

# ಭಾರತವನ್ನು ದಡಾರ – ರುಬೆಲ್ಲಾಮುಕ್ತ ರಾಷ್ಟ್ರವನ್ನಾಗಿ ಮಾಡುವುದು ನಿಮ್ಮ ಕೈಯಲ್ಲಿದೆ



## ಪಂಚಾಯತ್‌ರಾಜ್ ಸಮಿತಿಗೆ ಸಂದೇಶ

ದಡಾರ–ರುಬೆಲ್ಲಾ (MR) ಲಸಿಕೆಯು ದಡಾರ ಮತ್ತು ರುಬೆಲ್ಲಾ ಕಾಯಿಲೆಗಳಿಂದ ರಕ್ಷಣೆ ನೀಡುತ್ತದೆ. MR ಲಸಿಕೆಯನ್ನು ಒಂದು ವಿಶೇಷ ಅಭಿಯಾನದ ಮೂಲಕ ರಾಜ್ಯದ 9 ತಿಂಗಳಿಂದ 15 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನೀಡಲಾಗುತ್ತದೆ. ಈ ಅಭಿಯಾನವು ಎಲ್ಲಾ ಶಾಲೆಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಈ ಹಿಂದೆ ಲಸಿಕೆ ಪಡೆದಿದ್ದರೂ ಸಹ ಅಭಿಯಾನದ ಸಂದರ್ಭದಲ್ಲಿ MR ಲಸಿಕೆಯನ್ನು ನೀಡಬೇಕಾಗಿರುತ್ತದೆ.

ದಡಾರ ಒಂದು ಮಾರಣಾಂತಿಕ ಕಾಯಿಲೆಯಾಗಿದ್ದು, ಕೆಮ್ಮು ಮತ್ತು ಸೀನುವುದರ ಮೂಲಕ ಇತರರಿಗೆ ಹರಡುತ್ತದೆ. ದಡಾರ ನಿಮ್ಮ ಮಗುವನ್ನು ನ್ಯುಮೋನಿಯಾ, ಅತಿಸಾರ ಬೇದಿ, ಮೆದುಳಿನ ಸೋಂಕಿನಂತಹ ಕಾಯಿಲೆಗಳಿಗೆ ತುತ್ತಾಗಿಸಬಹುದು. ತುರಿಕೆ, ವಿಪರೀತ ಜ್ವರ, ಕೆಮ್ಮು, ನೆಗಡಿ ಮತ್ತು ಕೆಂಗಣ್ಣು ದಡಾರದ ಮುಖ್ಯ ಲಕ್ಷಣಗಳು.

ರುಬೆಲ್ಲಾ ರೋಗವು ಗರ್ಭಿಣಿ ಸ್ತ್ರೀಯರಲ್ಲಿ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಜನ್ಮತಃ ಗ್ಲುಕೋಮಾ, ಕಣ್ಣಿನಪೊರೆ, ಕಿವುಡುತನ, ಮೆದುಳು ಜ್ವರ, ಮಾನಸಿಕ ಅಸ್ವಸ್ಥತೆ, ಬುದ್ಧಿಮಾಂದ್ಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಈಡು ಮಾಡಬಹುದು. ರುಬೆಲ್ಲಾ ವೈರಸ್ ಗರ್ಭಪಾತಕ್ಕೂ ಸಹ ಕಾರಣವಾಗಬಹುದು.

NATIONAL HEALTH MISSION
राष्ट्रीय स्वास्थ्य मिशन

**7 ರಿಂದ 28 ಫೆಬ್ರವರಿ 2017**
**9 ತಿಂಗಳಿಂದ 15 ವರ್ಷದ ಮಕ್ಕಳ ಅಭಿಯಾನ**



ಬುದ್ಧಿವಂತರಾಗಿ!
ನಿಮ್ಮ ಮಗುವಿಗೆ ಸಂಪೂರ್ಣ ಲಸಿಕೆಗಳನ್ನು ಹಾಕಿಸಿ

**2020ಕ್ಕೆ ದಡಾರ ನಿರ್ಮೂಲನೆ ಹಾಗೂ ರುಬೆಲ್ಲಾ ನಿಯಂತ್ರಣ ಸಾಧಿಸೋಣ**

# ದಡಾರ-ರುಬೆಲ್ಲಾ ಲಸಿಕಾ ಅಭಿಯಾನ

- 2020ಕ್ಕೆ ದಡಾರ ನಿರ್ಮೂಲನೆ ಹಾಗೂ ರುಬೆಲ್ಲಾ ನಿಯಂತ್ರಣ ನಮ್ಮ ರಾಷ್ಟ್ರದ ಗುರಿಯಾಗಿದೆ
- 9 ತಿಂಗಳಿಂದ 15 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಲಸಿಕೆ ನೀಡುವುದರ ಮೂಲಕ ಸಮುದಾಯದಲ್ಲಿ ದಡಾರ ಮತ್ತು ರುಬೆಲ್ಲಾ ವಿರುದ್ಧ ಪ್ರತಿರಕ್ಷಣೆ ಹೆಚ್ಚಿಸುವುದು MR ಅಭಿಯಾನದ ಉದ್ದೇಶವಾಗಿರುತ್ತದೆ.
- MR ಅಭಿಯಾನದ ಲಸಿಕಾ ಸತ್ರಗಳು ಎಲ್ಲಾ ಸರ್ಕಾರಿ / ಸರ್ಕಾರಿ ಅನುದಾನಿತ / ಖಾಸಗಿ ಶಾಲೆಗಳಲ್ಲಿ, ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ, ಆರೋಗ್ಯ ಉಪಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತದೆ.

## ದಡಾರ ರುಬೆಲ್ಲಾ ಲಸಿಕಾ ಅಭಿಯಾನದಲ್ಲಿ ತಮ್ಮ ಪಾತ್ರ

- ಎಲ್ಲಾ ಪೋಷಕರಿಗೆ 9 ತಿಂಗಳಿಂದ 15 ವರ್ಷದೊಳಗಿನ ಪ್ರತಿಯೊಂದು ಮಗುವಿಗೆ ಲಸಿಕೆ ಹಾಕಿಸುವಂತೆ ಸಲಹೆ ನೀಡುವುದು
- ನಿಮ್ಮ ಮುಂದಾಳತ್ವದಲ್ಲಿ ಎಲ್ಲಾ ಮಕ್ಕಳನ್ನು ಲಸಿಕಾ ಸತ್ರಕ್ಕೆ ಕರೆತರಲು ಸಜ್ಜುಗೊಳಿಸುವುದು
- ನಿಮ್ಮ ಪ್ರದೇಶದಲ್ಲಿನ ಲಸಿಕಾ ಸತ್ರಗಳನ್ನು ಸಮುದಾಯದಲ್ಲಿನ ಪ್ರಭಾವಿ ವ್ಯಕ್ತಿಯೊಂದಿಗೆ ಉದ್ಘಾಟಿಸುವುದು ಹಾಗೂ ಪ್ರಚಾರ ಕೈಗೊಳ್ಳುವುದು
- ನಿಮ್ಮ ಪ್ರದೇಶದಲ್ಲಿ ಗುಣಮಟ್ಟದ ಮತ್ತು ಸುರಕ್ಷಿತ ಲಸಿಕಾ ಸತ್ರವನ್ನು ನಡೆಸಲು ಆರೋಗ್ಯ ಕಾರ್ಯಕರ್ತರ ತಂಡಕ್ಕೆ ಸಹಾಯಮಾಡಿ

NATIONAL HEALTH MISSION
राष्ट्रीय स्वास्थ्य मिशन

**7 ರಿಂದ 28 ಫೆಬ್ರವರಿ 2017**
**9 ತಿಂಗಳಿಂದ 15 ವರ್ಷದ ಮಕ್ಕಳ ಅಭಿಯಾನ**



ಬುದ್ಧಿವಂತರಾಗಿ!
ನಿಮ್ಮ ಮಗುವಿಗೆ ಸಂಪೂರ್ಣ ಲಸಿಕೆಗಳನ್ನು ಹಾಕಿಸಿ

**2020ಕ್ಕೆ ದಡಾರ ನಿರ್ಮೂಲನೆ ಹಾಗೂ ರುಬೆಲ್ಲಾ ನಿಯಂತ್ರಣ ಸಾಧಿಸೋಣ**

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು